

ಟಿ20 ವಿಶ್ವಕಪ್ 2024ರ ಟ್ರೋಫಿಯೊಂದಿಗೆ ಕಾಣಿಸಿಕೊಂಡ ಮಾಜಿ ಕ್ರಿಕೆಟಿಗ ಮೊಹಮ್ಮದ್ ಕೈಫ್

ಆಗಿದೆ. ಎರಡು ಸಲ ಚಾಂಪಿಯನ್ಸ್ ಟ್ರೋಫಿಯಲ್ಲಿ ರನ್ನರ್ಸ್ ಅಪ್ ಆಗಿತ್ತು.

ಚುಟುಕು ಕ್ರಿಕೆಟ್‌ನಲ್ಲಿ ವಿಶ್ವದ ಬಲಿಷ್ಠ ತಂಡಗಳಲ್ಲಿ ಒಂದಾದ ವೆಸ್ಟ್ ಇಂಡೀಸ್ ಕಳೆದ ವರ್ಷ ಏಕದಿನ ವಿಶ್ವಕಪ್‌ಗೆ ಅರ್ಹತೆ ಗಳಿಸದೇ ಅವಮಾನಕ್ಕೆ ಗುರಿಯಾಗಿತ್ತು. ಆಗ ಎದುರಿಸಿದ ನೋವು, ಟೀಕೆ, ಅವಮಾನವನ್ನು ಗೆಲುವಿನ ಹಾರವಾಗಿ ಪರಿವರ್ತಿಸಲು ಕಾಯುತ್ತಿದೆ. 1975 ಹಾಗೂ 1979ರಲ್ಲಿ ಐಸಿಸಿ ಏಕದಿನ ವಿಶ್ವಕಪ್‌ನಲ್ಲಿ ಚಾಂಪಿಯನ್ ಆಗಿದ್ದ ವಿಂಡೀಸ್ ಪಡೆ 1983ರಲ್ಲಿ 'ಕಪಿಲ್ ಡೇವಿಲ್ಸ್' ನೇತೃತ್ವದ ಭಾರತ ತಂಡದ ಎದುರು ಶರಣಾಗಿತ್ತು. ಈ ತಂಡ 2012 ಹಾಗೂ 2016ರಲ್ಲಿ ಟಿ–20 ಕ್ರಿಕೆಟ್‌ನಲ್ಲಿ ಎರಡು ಬಾರಿ ಟ್ರೋಫಿ ಗೆದ್ದ ಹೆಗ್ಗಳಿಕೆ ಹೊಂದಿದೆ. ಕಳೆದ ವರ್ಷ ಗುಂಪು ಹಂತದಲ್ಲಿಯೇ ನಿರ್ಗಮಿಸಿತ್ತು. ಈಗ ತವರಿನಲ್ಲಿಯೇ ನಡೆಯುವ ಟೂರ್ನಿಯಲ್ಲಿ ಮತ್ತೆ ಪುಟಿದೆದ್ದು ನಿಲ್ಲಲು ವಿಂಡೀಸ್ ಪಾಳೆಯಕ್ಕೆ ಅವಕಾಶವಿದೆ.

ಅಮೆರಿಕದಲ್ಲಿ ಮೊದಲ ಸಲ ವಿಶ್ವಕಪ್ ನಡೆಯಲಿರುವ ಕಾರಣ ಆ ದೇಶ ವಾಣಿಜ್ಯಿಕವಾಗಿ ಲಾಭದ ಲೆಕ್ಕಾಚಾರವನ್ನು ಹೊಂದಿರುವುದು ಗುಟ್ಟಾಗಿ ಉಳಿದಿಲ್ಲ. ಭಾರತ ಸ್ಪರ್ಧಾಕಣದಲ್ಲಿ ಇರುವಷ್ಟೂ ದಿನ ವಿವಿಧ ಮೂಲಗಳಿಂದ ಆತಿಥ್ಯ ದೇಶಕ್ಕೆ ಲಾಭ ಬರುತ್ತಲೇ ಇರುತ್ತದೆ. ಈ ಟೂರ್ನಿಯನ್ನು ಯಶಸ್ವಿಗೊಳಿಸಿ ಕ್ರಿಕೆಟ್ ಆಡುವ ಹೊಸ ರಾಷ್ಟ್ರಗಳನ್ನು ಉತ್ತೇಜಿಸಲು ಮತ್ತು ಸೆಳೆಯಲು ಐಸಿಸಿಗೆ ಮುಂದೆ ದೊಡ್ಡ ಸವಾಲಿದೆ. ಟೂರ್ನಿ ಯಶಸ್ಸಿನಲ್ಲಿ ಜಗತ್ತಿನ ಶ್ರೀಮಂತ ಕ್ರಿಕೆಟ್ ಮಂಡಳಿ ಬಿಸಿಸಿಐ ಪಾಲು ಬಲು ದೊಡ್ಡದು.

## ದಾಖಲೆಯ ಸಂಖ್ಯೆಯಲ್ಲಿ ತಂಡಗಳು

'ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್' (ಐಸಿಸಿ) ಆಯೋಜಿಸಿರುವ ಪುರುಷರ ಟಿ–20 ವಿಶ್ವಕಪ್ ಟೂರ್ನಿಯಲ್ಲಿ ಮೊದಲ ಬಾರಿಗೆ ದಾಖಲೆಯ ಸಂಖ್ಯೆಯಲ್ಲಿ 20 ತಂಡಗಳು ಕಣದಲ್ಲಿವೆ.

2007ರಲ್ಲಿ ಮೊದಲ ಬಾರಿಗೆ ಟೂರ್ನಿ ಆರಂಭವಾದಾಗ 12 ತಂಡಗಳಷ್ಟೇ ಇದ್ದವು. ಈಗಿನ ಒಂಬತ್ತನೇ ಆವೃತ್ತಿ ಸಂದರ್ಭದಲ್ಲಿ ತಂಡಗಳ ಸಂಖ್ಯೆ ಜಾಸ್ತಿಯಾಗಿದೆ. ಹಿಂದಿನ ಟೂರ್ನಿಯಲ್ಲಿ 16 ತಂಡಗಳಿದ್ದವು. ಈಗ 2022ರ ಟೂರ್ನಿಯಲ್ಲಿ ಮೊದಲ ಎಂಟರ ಒಳಗೆ ಸ್ಥಾನ ಪಡೆದ ಆಸ್ಟ್ರೇಲಿಯಾ, ಇಂಗ್ಲೆಂಡ್, ಭಾರತ, ನೆದರ್ಲೆಂಡ್ಸ್, ನ್ಯೂಜಿಲೆಂಡ್, ಪಾಕಿಸ್ತಾನ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಆತಿಥ್ಯ ವಹಿಸಿರುವ ಅಮೆರಿಕ ಮತ್ತು ವೆಸ್ಟ್ ಇಂಡೀಸ್, ಟಿ–20 ರ‍್ಯಾಂಕಿಂಗ್ ಆಧಾರದ ಮೇಲೆ ಅಫ್ಗಾನಿಸ್ತಾನ, ಬಾಂಗ್ಲಾದೇಶ, ಪ್ರಾದೇಶಿಕ ಅರ್ಹತೆಗಳ ಅನುಗುಣವಾಗಿ ಐರ್ಲೆಂಡ್, ಸ್ಕಾಟ್ಲೆಂಡ್, ಪಪುವಾ ನ್ಯೂಗಿನಿ, ಕೆನಡ, ನೇಪಾಳ, ಒಮನ್, ನಮೀಬಿಯಾ ಮತ್ತು ಉಗಾಂಡ ತಂಡಗಳು ಸ್ಪರ್ಧಾಕಣದಲ್ಲಿವೆ.

ಲೀಗ್ ಹಂತದಲ್ಲಿ ಒಟ್ಟು 20 ತಂಡಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿ ಗುಂಪಿನಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆಯುವ ತಂಡಗಳು 'ಸೂಪರ್ 8' ಹಂತಕ್ಕೆ ಅರ್ಹತೆ ಗಿಟ್ಟಿಸಲಿವೆ. ಈ ಹಂತದಲ್ಲಿನ ಎಂಟು ತಂಡಗಳ ನಡುವೆ ಎರಡು ಗುಂಪುಗಳನ್ನಾಗಿ ಮಾಡಿ ಪಂದ್ಯಗಳು ನಡೆಯಲಿವೆ. ಗುಂಪಿನಲ್ಲಿ ಮೊದಲ ಎರಡು ಸ್ಥಾನ ಪಡೆಯುವ ರಾಷ್ಟ್ರಗಳು ಸೆಮಿಫೈನಲ್‌ನಲ್ಲಿ ಪೈಪೋಟಿ ಎದುರಿಸಿ ಪ್ರಶಸ್ತಿ ಸುತ್ತು ಪ್ರವೇಶಿಸಲಿವೆ. ಫೈನಲ್ ಸೇರಿ ಒಟ್ಟು 55 ಪಂದ್ಯಗಳು ನಡೆಯಲಿವೆ.

2007ರಲ್ಲಿ ಮೊದಲ ಬಾರಿಗೆ ಟಿ–20 ವಿಶ್ವಕಪ್ ನಡೆದಿತ್ತು. ಆಗಿನಿಂದ ಐಸಿಸಿ ಪ್ರತಿ ಎರಡು ವರ್ಷಗಳಿಗೊಮ್ಮೆ ಟೂರ್ನಿ ಆಯೋಜಿಸುತ್ತಾ ಬಂದಿದೆ. 2020ರಲ್ಲಿ ಆಸ್ಟ್ರೇಲಿಯಾದಲ್ಲಿ ಈ ಟೂರ್ನಿ ಸಂಘಟಿಸಿತ್ತಾದರೂ, ಕೋವಿಡ್ ಕಾರಣದಿಂದಾಗಿ ಮುಂದೂಡಲಾಗಿತ್ತು.

## ವಿಸ್ತಾರವಾಗುತ್ತಿದೆ ಕ್ರಿಕೆಟ್ ಜಗತ್ತು

ಕ್ರಿಕೆಟ್ ಎಷ್ಟೇ ಖ್ಯಾತಿ ಹೊಂದಿದ್ದರೂ ಫುಟ್‌ಬಾಲ್ ಆಡುವಷ್ಟು ದೇಶಗಳು ಕ್ರಿಕೆಟ್ ಆಡುವುದಿಲ್ಲ. ಹಾಗಾಗಿ ಕ್ರಿಕೆಟ್ ಖ್ಯಾತಿಯೂ ಅಷ್ಟಿಲ್ಲ ಎನ್ನುವ ಟೀಕೆಯಂತೂ ಇದ್ದೇ ಇದೆ. ಆದರೆ ಈ ಸಲದ ವಿಶ್ವಕಪ್‌ನಲ್ಲಿ ಗರಿಷ್ಠ ತಂಡಗಳು ಪಾಲ್ಗೊಳ್ಳುತ್ತಿರುವ ಮೂಲಕ ಕ್ರಿಕೆಟ್ ಜಗತ್ತು ತನ್ನ ವ್ಯಾಪ್ತಿ ವಿಸ್ತರಿಸಿಕೊಳ್ಳುತ್ತಿದೆ.

ಕ್ರಿಕೆಟ್ ಜಗತ್ತಿನ ಲಿಲ್ಲಿಪುಟ್ ರಾಷ್ಟ್ರಗಳಾದ ಕೆನಡ, ಅಮೆರಿಕ ಮತ್ತು ಉಗಾಂಡ ಮೊದಲ ಬಾರಿಗೆ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ಪಡೆದಿವೆ. ಕೆನಡದಲ್ಲಿ ಐಸ್ ಹಾಕಿ ರಾಷ್ಟ್ರೀಯ ಕ್ರೀಡೆಯಾದರೂ, ಹಲವು ವರ್ಷಗಳಿಂದ ಅಲ್ಲಿ ಕ್ರಿಕೆಟ್ ಕಂಪು ಹರಡುತ್ತಿದೆ. ಈ ರಾಷ್ಟ್ರ ಏಕದಿನ ಕ್ರಿಕೆಟ್ ಪಂದ್ಯಗಳನ್ನಾಡಲು 1968ರಲ್ಲಿ ಮಾನ್ಯತೆ ಪಡೆದು ಹತ್ತು ವರ್ಷಗಳ ತರುವಾಯ ಮೊದಲ ಅಂತರರಾಷ್ಟ್ರೀಯ ಏಕದಿನ ಪಂದ್ಯವನ್ನಾಡಿತ್ತು. ಅದೇ ವರ್ಷ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಕಣಕ್ಕಿಳಿದಿತ್ತು. ಇದುವರೆಗೆ 89 ಪಂದ್ಯಗಳನ್ನಾಡಿದೆ.

ಕೆನಡ ತಂಡ ವಿಶ್ವ ಕ್ರಿಕೆಟ್ ಲೀಗ್‌ನಲ್ಲಿ ಮೊದಲ ಡಿವಿಷನ್, ಇಂಟರ್‌ನ್ಯಾಷನಲ್ ಕಪ್ ಟೂರ್ನಿಯಲ್ಲಿ 2004ರಲ್ಲಿ ರನ್ನರ್ಸ್ ಅಪ್, ಕಾಮನ್‌ವೆಲ್ತ್ ಕ್ರೀಡಾಕೂಟ, ಐಸಿಸಿ ಅಮೆರಿಕಸ್ ಚಾಂಪಿಯನ್‌ಷಿಪ್ ಟೂರ್ನಿಗಳಲ್ಲಿ ಆಡಿ ಅನುಭವ ಗಳಿಸಿಕೊಂಡಿದೆ. ಇದುವರೆಗೆ 58 ಅಂತರರಾಷ್ಟ್ರೀಯ ಟಿ–20 ಪಂದ್ಯಗಳನ್ನಾಡಿದ್ದು 30ರಲ್ಲಿ ಜಯ ಸಾಧಿಸಿದೆ.

ಫುಟ್‌ಬಾಲ್ ರಾಷ್ಟ್ರೀಯ ಕ್ರೀಡೆಯಾಗಿರುವ ಉಗಾಂಡ ದೇಶದ ತಂಡ 2019ರಲ್ಲಿ ಮೊದಲ ಬಾರಿಗೆ ಅಂತರರಾಷ್ಟ್ರೀಯ ಟಿ–20 ಪಂದ್ಯವನ್ನಾಡಿದ್ದು, ಇದುವರೆಗೆ 91 ಪಂದ್ಯಗಳನ್ನಾಡಿ 69ರಲ್ಲಿ ಗೆಲುವು ಸಾಧಿಸಿದೆ. ಏಕದಿನ ಪಂದ್ಯಗಳಲ್ಲಿ ಆಡುವ ಅವಕಾಶವಿನ್ನೂ ಉಗಾಂಡಕ್ಕೆ ಲಭಿಸದಿದ್ದರೂ, ಐಸಿಸಿ ಇಂಟರ್‌ನ್ಯಾಷನಲ್ ಕಪ್, ವಿಶ್ವ ಕ್ರಿಕೆಟ್ ಲೀಗ್ ಸೇರಿದಂತೆ ಹಲವು ಟೂರ್ನಿಗಳಲ್ಲಿ ಸವಾಲು ಎದುರಿಸಿದೆ. ಈ ದೇಶದಲ್ಲಿ ಮಹಿಳಾ ತಂಡವೂ ಸ್ಪರ್ಧಾಕಣಕ್ಕೆ ಧುಮುಕಲು ಅಣಿಯಾಗುತ್ತಿದೆ. ಹೀಗಾಗಿ ಫುಟ್‌ಬಾಲ್ ಪ್ರಿಯರೇ ಹೆಚ್ಚಾಗಿರುವ ಉಗಾಂಡದಲ್ಲಿ ಒಂದಷ್ಟು ಜನ ಕ್ರಿಕೆಟ್‌ನತ್ತ ಹೊರಳಿದರೂ ಈ ಕ್ರೀಡೆಗೆ ಆಫ್ರಿಕಾದ ರಾಷ್ಟ್ರಗಳಲ್ಲಿ ಒಂದಷ್ಟು ನೆಲೆ ಸಿಕ್ಕಂತಾಗುತ್ತದೆ.

ಪ್ರತಿ ವಿಶ್ವಕಪ್‌ಗೂ ಒಂದಷ್ಟು ಹೊಸ ದೇಶಗಳು ಕ್ರಿಕೆಟ್‌ನತ್ತ ಹೊರಳಿದರೆ ಕ್ರೀಡೆಯ ಸೊಬಗು ವಿಸ್ತರಿಸಿದಂತಾಗುತ್ತದೆ. ಕ್ರೀಡೆಯ ಮೂಲಕ ರಾಷ್ಟ್ರಗಳ ನಡುವೆ ಸಂಬಂಧ ಬೆಸೆಯುವ ಪರಿಪಾಟದ ಮತ್ತೊಂದು ಹೊಸ ಅಧ್ಯಾಯವಂತೂ ಈಗಿನ ವಿಶ್ವಕಪ್ ಮೂಲಕ ಆರಂಭವಾಗಲಿದೆ. ಈ ಪ್ರಕ್ರಿಯೆ ನಿರಂತರವಾಗಿರಲಿ.

ಪ್ರತಿಕ್ರಿಯಿಸಿ: feedback@sudha.co.in